ಕಥೆ

# ಒಂಟಿ ಪಿಶಾಚಿ



**ಅಬ್ದುಲ್ ರಶೀದ್**

ಕಲೆ: ವಿಶ್ವನಾಥ್ ಎ.ಎಸ್.

ಶರದೃತುವಿನ ಆರಂಭ ಕಾಲ. ಭಾದ್ರಪದ ಕಳೆದು ಅಶ್ವಯುಜ ನಗರಕ್ಕೆ ಕಾಲಿಡುವ ಹೊತ್ತು.

'ಮಳೆಗಾಲವು ಕಳೆದು, ಕಪ್ಪಗಿನ ಮೋಡಗಳು ಬಿಳುಪಾಗಿ, ಹಗಲು ಆಗಸದಲ್ಲಿ ದಿನಮಣಿ ಸೂರ್ಯನ ಬೆಳಕು ಬೆಳಗಿ, ಇರುಳ ಆಗಸದಲ್ಲಿ ಚಂದಿರನ ಹೊಳಪು ಮಿನುಗಿ, ಉಕ್ಕಿದ್ದ ನದಿಗಳು ಶಾಂತವಾಗಿ, ಆಕಾಶ ಮಾರ್ಗದಲ್ಲಿ ಹಂಸಗಳು ಹಾರಿ ಬಂದು, ಕೊಳದಲ್ಲಿ ತಾವರೆಗಳು ಅರಳಿ, ತಲೆಯ ಮೇಲೆ ಅರಳೆಹತ್ತಿ ಗಳಂತಹ ತೆಳು ಮೋಡಗಳು ತೇಲಿ, ಮೈಸೂರಿನ ಮಹಾರಾಜರು ಯುದ್ಧಕ್ಕೆ ಹೋಗಿದ್ದವರು ಶಹರಿಗೆ ಮರಳಿ ವಿಜಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸಿದ್ಧರಾಗುತ್ತಿದ್ದ ಕಾಲ.'

ಹೈಸ್ಕೂಲಿನ ಟೀಚರ್ ಸೌಭಾಗ್ಯಲಕ್ಷ್ಮಿ ಮೇಡಂ ಇತಿಹಾಸವನ್ನೂ, ಕುಮಾರವ್ಯಾಸನನ್ನೂ ಮಿಕ್ಸಿಯಲ್ಲಿ ತಿರುಗಿಸಿದ ಹಾಗೆ ಅರೆದು ತಮ್ಮ ವರ್ಣನೆಗೆ ತಾವೇ ಖುಶಿಯಾಗಿ ಕ್ಲಾಸಲ್ಲೇ ಕರಗಿ ನೀರಾಗುತ್ತಿದ್ದರು. ಅವರ ನಾಚಿಕೆಯ ಕಾರಣ ಅರಿತು ನಾನೂ ಕುಳಿತಲ್ಲೇ ನಾಚಿಕೊಂಡು ಚಡಪಡಿಸುತ್ತಿದ್ದೆ. ನವರಾತ್ರಿಯ ಸಮಯದಲ್ಲೇ ಅದೆಲ್ಲಿಂದಲೋ ಅವತರಿಸುತ್ತಿದ್ದ ಕಂಸಾಳೆಯ ಮೇಷ್ಟ್ರು, ದಸರಾ ಮುಗಿಸಿಕೊಂಡು ವಾಪಸಾಗುತ್ತಿದ್ದರು. ಇರುವಷ್ಟು ದಿನವೂ ಸೌಭಾಗ್ಯಲಕ್ಷ್ಮಿ ಮೇಡಂ ಮನೆಯ ಮೇಲುಪ್ಪರಿಗೆಯಲ್ಲೇ ಉಳಿದುಕೊಳ್ಳುತ್ತಿದ್ದರು. ಅಲ್ಲಿಂದಲೇ ನವರಾತ್ರಿಯ ಕಂಸಾಳೆ ಕುಣಿತದ ತಾಲೀಮಿಗೆ ಬರುತ್ತಿದ್ದರು. ಅಷ್ಟೂ ದಿನಗಳು ನನ್ನ ಸೈಕಲಿನ ಎದುರಿನ ರಾಡಲ್ಲಿ ನಾನು ಕೂರಬೇಕಿತ್ತು. ಅವರು ನನ್ನ ಸೈಕಲನ್ನು ಹೊಡೆದುಕೊಂಡು ಶಾಲೆಗೆ ಬರುತ್ತಿದ್ದರು. ಹಾಗೆ ಬರುವಾಗ ಅವರ ಮೈಯಿಂದ ಬರುತ್ತಿರುವ, ಮೇಡಂ ಬಳಸುವ ಪರಿಮಳ. ನನಗೆ ಸಂಕಟವಾಗುತ್ತಿತ್ತು. ಸಂಜೆ ತಾಲೀಮು ಮುಗಿಸಿ ಹೋಗುವಾಗ ಅವರಿಬ್ಬರೇ ನಡೆದು ಹೋಗುತ್ತಿದ್ದರು. ನಾನು ಸೈಕಲ್ಲಿನಲ್ಲಿ ಕದ್ದು ಮುಚ್ಚಿ ಅವರನ್ನು ಹಿಂಬಾಲಿಸುತ್ತಿದ್ದೆ. ಅಗ್ರಹಾರದ ಮಾರುಕಟ್ಟೆ ಹೊಕ್ಕು ಮಲ್ಲಿಗೆ ಮುಡಿದು, ಇಂದ್ರಭವನದಲ್ಲಿ ಕಾಫಿ ಕುಡಿದು, ಅಲ್ಲೇ ರಾತ್ರಿಯ ಸಿನೆಮಾ ಮುಗಿಸಿ ಅವರು ಗಂಡ ಹೆಂಡತಿಯ ಹಾಗೆ ಕತ್ತಲಲ್ಲಿ ಕೈಹಿಡಿದು ನಡೆಯುತ್ತಾ ಮನೆ ತಲುಪುತ್ತಿದ್ದರು. ಸೈಕಲನ್ನು ಒರಗಿಸಿ ನಿಲ್ಲಿಸಿ ಕದ್ದು ನೋಡುತ್ತಿದ್ದ ನನಗೆ ಸಂಕಟವಾಗುತ್ತಿತ್ತು.

'ಮಳೆಗಾಲವು ಕಳೆದು, ಕಪ್ಪಗಿನ ಮೋಡಗಳು ಬಿಳುಪಾಗಿ, ಹಗಲು ಆಗಸದಲ್ಲಿ ದಿನಮಣಿ ಸೂರ್ಯನ ಬೆಳಕು ಬೆಳಗಿ, ಇರುಳ ಆಗಸದಲ್ಲಿ ಚಂದಿರನ ಹೊಳಪು ಮಿನುಗಿ, ಉಕ್ಕಿದ್ದ ನದಿಗಳು ಶಾಂತವಾಗಿ, ಆಕಾಶ ಮಾರ್ಗದಲ್ಲಿ ಹಂಸಗಳು ಹಾರಿ ಬಂದು, ಕೊಳದಲ್ಲಿ ತಾವರೆಗಳು ಅರಳಿ, ತಲೆಯ ಮೇಲೆ ಅರಳೆಹತ್ತಿ ಗಳಂತಹ ತೆಳು ಮೋಡಗಳು ತೇಲಿ, ಮೈಸೂರಿನ ಮಹಾರಾಜರು ಯುದ್ಧಕ್ಕೆ ಹೋಗಿದ್ದವರು ಶಹರಿಗೆ ಮರಳಿ ವಿಜಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸಿದ್ಧರಾಗುತ್ತಿದ್ದ ಕಾಲ.'

ನನ್ನ ಹಳೆಯ ಡೀಸೆಲ್ ಬುಲ್ಲೆಟ್ಟಿನ ಮೇಲೇರಿ,